QP CODE: 44201

ದ್ವಿತೀಯ ಸೆಮಿಸ್ಟರ್ ಬಿ.ಸಿ.ಎ. ಪದವಿ ಪರೀಕ್ಷೆ, ಮೇ / ಜೂನ್ 2026

(SEP 2024ರ ಸ್ಕೀಂ)

ಕನ್ನಡ ಭಾಷಾ ಪತ್ರಿಕೆ - ೨

(SBB 0010) - ಗಣಕ ಸಿರಿ - ೨

ಅವಧಿ : 3 ಗಂಟೆಗಳು ಗರಿಷ್ಠ ಅಂಕಗಳು : 80

ವಿದ್ಯಾರ್ಥಿಗಳಿಗೆ ಸೂಚನೆಗಳು:

1. ವಿದ್ಯಾರ್ಥಿಯು ವಿಭಾಗ ಸಂಖ್ಯೆ ಹಾಗೂ ಪ್ರಶ್ನೆ ಸಂಖ್ಯೆಗಳನ್ನು ಸ್ಪಷ್ಟವಾಗಿ ಮಾರ್ಜಿನ್ ಗೆರೆಯ ಒಳಗೆ ಬರೆಯಬೇಕು.
2. ವಿಭಾಗ ಸಂಖ್ಯೆ ಹಾಗೂ ಪ್ರಶ್ನೆ ಸಂಖ್ಯೆಗಳನ್ನು ನಮೂದಿಸದೇ ಇರುವ ಉತ್ತರಗಳನ್ನು ಮೌಲ್ಯಮಾಪನ ಮಾಡಲಾಗುವುದಿಲ್ಲ.
3. ಪ್ರಶ್ನೆ ಪತ್ರಿಕೆಯ ಮೇಲೆ (ನೊಂದಣಿ ಸಂಖ್ಯೆ ಹೊರತುಪಡಿಸಿ) ಬೇರೆ ಯಾವುದೇ ತರಹದ ಬರವಣಿಗೆಗಳನ್ನು ಮಾಡಬಾರದು.

1. ಅ) ಆರು ಪ್ರಶ್ನೆಗಳಿಗೆ ಮೂರು - ನಾಲ್ಕು ಸಾಲುಗಳಲ್ಲಿ ಉತ್ತರಿಸಿ. **(6x2=12)**

1. ಕವಿರಾಜಮಾರ್ಗಕಾರ ಗುರುತಿಸಿರುವ ಅಚ್ಚಗನ್ನಡ ಪ್ರದೇಶಗಳು ಯಾವುವು?
2. ಶಂಭಣ್ಣ ಮಾಸ್ತರರ ಆಗಮನದಿಂದ ಬೇಲೂರಿನಲ್ಲಿ ಆದ ಬದಲಾವಣೆಯನ್ನು ತಿಳಿಸಿ.
3. ಮರಿಯಮ್ಮನಹಳ್ಳಿ ಮಂಜಮ್ಮಳ ದೈತ್ಯ ಪ್ರತಿಭೆ ಕುರಿತು ಸಂಕ್ಷಿಪ್ತವಾಗಿ ಬರೆಯಿರಿ.
4. 'ಮಹಾನಗರ' ಕವಿತೆಯಲ್ಲಿನ ನಗರ ಜೀವನದ ಚಹರೆಯನ್ನು ಬರೆಯಿರಿ.
5. ದಾವಲಸಾಬನ ಎತ್ತುಗಳ ಮೇಲಿನ ಪ್ರೀತಿಯನ್ನು ವಿವರಿಸಿ.
6. ಯೋಧ ಆಕಾಶ್ ಸತ್ತ ನಂತರ ಕೋಮಲಿ ಮಗುವನ್ನು ಹೇಗೆ ಸಮಾಧಾನಿಸುತ್ತಿದ್ದಳು?
7. ಶಾಲಾ ಮಾಸ್ತರ್ ಕೂಬಾನಾಯ್ಕ್ ಅವರ ಬದುಕಿನ ಸಾಥಕತೆಯನ್ನು ಬರೆಯಿರಿ.
8. ನಂದಿನಿಯನ್ನು ಪೋಲಿಸ್ ಆಫೀಸರ್ ಬಂಧಿಸಲು ಕಾರಣವೇನು ತಿಳಿಸಿ.

ಆ) ಎಂಟು ಪದಗಳಿಗೆ ಅರ್ಥ ಬರೆಯಿರಿ. **(8x½=04)**

1) ಮಧುರ 2) ಮಾಗಿ 3) ಹಸುಳೆ 4) ಅಳುಕು 5) ಬಟವಾಡೆ 6) ಪ್ರಹಸನ
7) ಜಳಕ 8) ದುಷ್ಕಾಳ 9) ಓಣಿ 10) ಅಖಿಳ 11) ಶುಷ್ಕ 12) ದಿಟ

2. ಈ ಕೆಳಗಿನ ಯಾವುದಾದರೂ ನಾಲ್ಕು ವಿಷಯಗಳಿಗೆ ಟಿಪ್ಪಣಿ ಬರೆಯಿರಿ. **(4x3=12)**

1) ಪು.ತಿ.ನ. 2) ತಂಪೂರು 3) ತೀಜ್ ಹಬ್ಬ
4) ಸಾರಂಗ-ಸಿರಿಮಂತ 5) ರಾಕ್ ಸ್ಟಾರ್ ರಾಧಕ್ಕ 6) ಮಲ್ಲಿಗೆ

3. ನಾಲ್ಕನ್ನು ಕುರಿತು ಸಂದರ್ಭ ಸ್ವಾರಸ್ಯ ಬರೆಯಿರಿ. **(4x3=12)**

1. ಕಾವೇರಿಯಿಂದಮಾ ಗೋದಾವರಿವರಮಿರ್ಪ ನಾಡದಾ ಕನ್ನಡದೊಳ್.
2. ಗುಡಿಯನೊಂದು ಬಳಸು ಬಂದು ಒಳಗೆ ಹೊಕ್ಕೆನು.
3. ದಕ್ಷಿಣಾಫ್ರಿಕದ ಕಗ್ಗತ್ತಲಿಗೆ ಬೆಳಕು ಮೂಡೀತು ಹೇಗೆ?
4. ಬೆಳಗಾದರೆ ಜೀತದಾಳುಗಳಾದ ಲೆಂಕಿಗರ ಹಾಗೆ.
5. ಮಾರಬಹುದೇ ಅವಳ ಬಳೆ ತೊಟ್ಟ ಸಂಭ್ರಮವನ್ನು.
6) ಕನಸುಗಳು ತುಂಬಾ ಕಾಸ್ಟಲೀ ಅಲ್ವಾ?

4. ನಾಲ್ಕು ಪ್ರಶ್ನೆಗಳಿಗೆ ಸಂಕ್ಷಿಪ್ತ ಉತ್ತರ ಬರೆಯಿರಿ. (4x5=20)

1. ಪ್ರೀತಿ ಇಲ್ಲದ ಮೇಲೆ ಕವಿತೆಯ ಆಶಯವೇನು ?
2. ಗಾಂಧಿ ದುಂಡಪ್ಪ ಊರನ್ನು ಆದರ್ಶವಾಗಿಸಿದ ಬಗ್ಗೆ ಬರೆಯಿರಿ.
3. ಜೀವಿ ಜೀವಿಗಳ ನಡುವೆ ಲೇಖನದ ಆಶಯವನ್ನು ವಿವರಿಸಿ.
4. ಮಹಾನಗರ ಕವಿತೆಯ ಮಾನವನ ಯಾಂತ್ರಿಕತೆಯ ಬದುಕನ್ನು ಹೇಗೆ ಚಿತ್ರಿಸಿದೆ.
5. ಯುದ್ಧದಿಂದ ಗಂಡನನ್ನು ಕಳೆದುಕೊಂಡ ಹೆಣ್ಣಿನ ಚಿತ್ರಣವನ್ನು ಅರ್ಧ ನೇಯ್ದಿಟ್ಟ ಸ್ವೆಟರ್ ಕಥೆ ಹೇಗೆ ವಿವರಿಸಿದೆ.
6. ಶಿಕ್ಷಕರೊಬ್ಬರ ಸಾರ್ಥಕ ಸೇವಾ ಕಾರ್ಯವನ್ನು 'ದೇವರ ಮನೆಯಲ್ಲಿ ನನ್ನ ಫೋಟೋ' ಲೇಖನ ಹೇಗೆ ಕಟ್ಟಿಕೊಟ್ಟಿದೆ.

5. ಎರಡು ಪ್ರಶ್ನೆಗಳಿಗೆ ವಿವರಣಾತ್ಮಕವಾಗಿ ಉತ್ತರಿಸಿ. (2x10=20)

1. ಕವಿರಾಜಮಾರ್ಗದಲ್ಲಿ ಕನ್ನಡ ನಾಡು-ನುಡಿ ಅಭಿಮಾನ ಹೇಗೆ ಚಿತ್ರಿತವಾಗಿದೆ? ವಿವರಿಸಿ.
2. ಪುಟ್ಟದೇವತೆಯ ಸ್ವಪ್ನಗಳು ಕಥೆಯ ಆಶಯವನ್ನು ವಿವರಿಸಿ.
3. ಸಂಬಂಧಗಳ ಸಾರ್ಥಕತೆಯ ಹುಡುಕಾಟವನ್ನು ಮಲ್ಲಿಗೆ ನಾಟಕವು ಹೇಗೆ ಕಟ್ಟಿಕೊಡುತ್ತದೆ? ವಿವರಿಸಿ.

* * *